# ಕುವೆಂಪು ವಿಶ್ವವಿದ್ಯಾನಿಲಯ

**ನಿರ್ದೇಶಕರ ಕಾರ್ಯಾಲಯ,**

**ದೂರ ಶಿಕ್ಷಣ ನಿರ್ದೇಶನಾಲಯ**

ಜ್ಞಾನಸಹ್ಯಾದ್ರಿ ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ

ದೂರವಾಣಿ-08282-256450, ಫ್ಯಾಕ್ಸ್: 256370, ಇ-ಮೇಲ್: info@kuvempuuniversitydde.org


**ಸಂಖ್ಯೆ:ಕುವಿ/ದೂಶಿನಿ-2/2017-18/** **ದಿನಾಂಕ: 29.01.2018**

## ಅ ಧಿ ಸೂ ಚ ನೆ

ವಿಷಯ:- ದ್ವಿತೀಯ ಸ್ನಾತಕೋತ್ತರ ಪದವಿ ಹಾಗೂ ದ್ವಿತೀಯ ಮತ್ತು ತೃತೀಯ ಸ್ನಾತಕ ಪದವಿಗಳ ಪ್ರವೇಶಾತಿ ಕುರಿತು.

ಉಲ್ಲೇಖ:- ಮಾನ್ಯ ಕುಲಸಚಿವರ ಅನುಮೋದನೆ ದಿನಾಂಕ 29.01.2018

-o-

ಪ್ರಥಮ ವರ್ಷದ ಸ್ನಾತಕೋತ್ತರ ಮತ್ತು ಸ್ನಾತಕ ಪದವಿಗಳ ವಾರ್ಷಿಕ ಪರೀಕ್ಷೆಗಳು ಯಶಸ್ವಿಯಾಗಿ ಮುಕ್ತಾಯಗೊಂಡಿವೆ. ಈ ಸಂಬಂಧ ದ್ವಿತೀಯ ಸ್ನಾತಕೋತ್ತರ ಪದವಿ ಹಾಗೂ ದ್ವಿತೀಯ ಮತ್ತು ತೃತೀಯ ಸ್ನಾತಕ ಪದವಿಗಳ ಪ್ರವೇಶ ಪ್ರಕ್ರಿಯೆಗಳಿಗೆ ಚಾಲನೆ ನೀಡಲಾಗಿದೆ. ಈ ಸಂಬಂಧ ಕುವೆಂಪು ವಿಶ್ವವಿದ್ಯಾಲಯದಲ್ಲಿ ನೇರ ಪ್ರವೇಶ ಪಡೆದ ವಿದ್ಯಾರ್ಥಿಗಳು **(KUDDE Students)** ಸೇರಿದಂತೆ ಕುವೆಂಪು ವಿಶ್ವವಿದ್ಯಾಲಯದ ಅಧಿಕೃತ ಅಧ್ಯಯನ ಕೇಂದ್ರಗಳ ಮೂಲಕ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಡಿಸೆಂಬರ್ 2017 ರ ಮಾಹೆಯಲ್ಲಿ ನಡೆದ ವಾರ್ಷಿಕ ಪರೀಕ್ಷೆಗಳ ಫಲಿತಾಂಶವನ್ನು ನಿರೀಕ್ಷಿಸದೆ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿ ಹಾಗೂ ದ್ವಿತೀಯ ಮತ್ತು ತೃತೀಯ ಸ್ನಾತಕ ಪದವಿಗಳಿಗೆ ಈ ಕೆಳಕಂಡ ದಿನಾಂಕಗಳಂದು ನಿಯಮಾನುಸಾರ ಪ್ರವೇಶವನ್ನು ಪಡೆದುಕೊಳ್ಳಬಹುದಾಗಿದೆ.

| ಕ್ರ. ಸಂ. | ವಿವರ | ಕೊನೆಯ ದಿನಾಂಕ |
|---|---|---|
| 1 | ದಂಡ ಶುಲ್ಕ ರಹಿತ ದ್ವಿತೀಯ ವರ್ಷದ ಸ್ನಾತಕೋತ್ತರ ಹಾಗೂ ದ್ವಿತೀಯ ಹಾಗೂ ತೃತೀಯ ವರ್ಷದ ಸ್ನಾತಕ ಪದವಿಗಳಿಗೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 29.01.2018 ರಿಂದ 15.03.2018 ರವರೆಗೆ |
| | ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ನೇರ ಪ್ರವೇಶ ಪಡೆಯುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಅಧ್ಯಯನ ಕೇಂದ್ರಗಳ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳ ಒಟ್ಟು ಪ್ರವೇಶ ಶುಲ್ಕವನ್ನು ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ಬ್ಯಾಂಕ್‌ಗೆ ಪಾವತಿಸಿ ಚಲನ್ ಪಡೆಯುವ ಕೊನೆಯ ದಿನಾಂಕ **(ಅಧ್ಯಯನ ಕೇಂದ್ರಗಳಿಗೆ ಮಾತ್ರ ಅನ್ವಯಿಸುತ್ತದೆ)** | 16.03.2018 ರಿಂದ 19.03.2018 ರವರೆಗೆ |
| 2 | ದಂಡ ಶುಲ್ಕ ರೂ. 200/- ರ ಸಹಿತ ದ್ವಿತೀಯ ವರ್ಷದ ಸ್ನಾತಕೋತ್ತರ ಹಾಗೂ ದ್ವಿತೀಯ ಹಾಗೂ ತೃತೀಯ ವರ್ಷದ ಸ್ನಾತಕ ಪದವಿಗಳಿಗೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 20.03.2018 ರಿಂದ 13.04.2018 ರವರೆಗೆ |
| | ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ನೇರ ಪ್ರವೇಶ ಪಡೆಯುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಅಧ್ಯಯನ ಕೇಂದ್ರಗಳ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳ ಒಟ್ಟು ಪ್ರವೇಶ ಶುಲ್ಕವನ್ನು ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ಬ್ಯಾಂಕ್‌ಗೆ ಪಾವತಿಸಿ ಚಲನ್ ಪಡೆಯುವ ಕೊನೆಯ ದಿನಾಂಕ **(ಅಧ್ಯಯನ ಕೇಂದ್ರಗಳಿಗೆ ಮಾತ್ರ ಅನ್ವಯಿಸುತ್ತದೆ)** | 16.04.2018 ರಿಂದ 19.04.2018 ರವರೆಗೆ |

| | | |
|---|---|---|
| | ದಂಡ ಶುಲ್ಕ ರೂ. 400/- ರ ಸಹಿತ ದ್ವಿತೀಯ ವರ್ಷದ ಸ್ನಾತಕೋತ್ತರ ಹಾಗೂ ದ್ವಿತೀಯ ಹಾಗೂ ತೃತೀಯ ವರ್ಷದ ಸ್ನಾತಕ ಪದವಿಗಳಿಗೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 20.04.2018 ರಿಂದ 11.05.2018 ರವರೆಗೆ |
| 3 | ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ನೇರ ಪ್ರವೇಶ ಪಡೆಯುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಅಧ್ಯಯನ ಕೇಂದ್ರಗಳ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳ ಒಟ್ಟು ಪ್ರವೇಶ ಶುಲ್ಕವನ್ನು ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ಬ್ಯಾಂಕ್‌ಗೆ ಪಾವತಿಸಿ ಚಲನ್ ಪಡೆಯುವ ಕೊನೆಯ ದಿನಾಂಕ **(ಅಧ್ಯಯನ ಕೇಂದ್ರಗಳಿಗೆ ಮಾತ್ರ ಅನ್ವಯಿಸುತ್ತದೆ)** | 14.05.2018 ರಿಂದ 16.05.2018 ರವರೆಗೆ |
| **4** | **ಮಾನ್ಯತೆ ಪಡೆದ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ಆಯಾ ಅಧ್ಯಯನ ಕೇಂದ್ರಗಳ ಮೂಲಕ ಪಡೆಯಲಾದ ಪ್ರವೇಶ ಅರ್ಜಿಗಳನ್ನು ನಿಗದಿತ ಪ್ರವೇಶ ಶುಲ್ಕದೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ** | **26.05.2018** |

**ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳಿಗೆ ವಿಶೇಷ ಸೂಚನೆಗಳು :-**

ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳಿಗೆ ದ್ವಿತೀಯ ಹಾಗೂ ತೃತೀಯ ವರ್ಷಕ್ಕೆ ಅರ್ಜಿಗಳನ್ನು ಸ್ವೀಕರಿಸಲು ಹಾಗೂ ಸ್ವೀಕರಿಸಲಾದ ಪ್ರವೇಶ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳು ಮೇಲಿನ ಕೋಷ್ಟಕದ ಕಾಲಂ ಸಂಖ್ಯೆ (4) ರಲ್ಲಿ ನಮೂದಿಸಿದ ದಿನಾಂಕದ ನಂತರ ಪ್ರವೇಶಾತಿ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಅವಕಾಶವಿರುವುದಿಲ್ಲ. ಆದಾಗ್ಯೂ ವಿಶೇಷ ಸಂದರ್ಭಗಳಲ್ಲಿ ಅರ್ಜಿ ಸಲ್ಲಿಸ ಬಯಸಿದಲ್ಲಿ ತಲಾ ವಿದ್ಯಾರ್ಥಿಗೆ ನಿಗದಿತ ಪ್ರವೇಶ ಶುಲ್ಕದ ಜೊತೆಗೆ ಹೆಚ್ಚುವರಿಯಾಗಿ **ರೂ. 1000/-** (ರೂಪಾಯಿ **ಒಂದು ಸಾವಿರ** ಮಾತ್ರ) ಗಳ ದಂಡ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಆದ್ದರಿಂದ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳು ವಿಶೇಷ ದಂಡಶುಲ್ಕ ಪಾವತಿಗೆ ಅವಕಾಶ ನೀಡದೆ ನಿಗದಿತ ಸಮಯದೊಳಗೆ, ಶುಲ್ಕವನ್ನು ಸಂಪೂರ್ಣವಾಗಿ ಪಾವತಿಸಿ ಅಧ್ಯಯನ ಸಾಮಾಗ್ರಿಗಳನ್ನು ಪಡೆದುಕೊಳ್ಳುವುದು.

ಮುಂದುವರಿದಂತೆ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳು ನಿಗದಿತ ಶುಲ್ಕವನ್ನು ಪ್ರತಿ ಕೋರ್ಸ್‌ಗೆ ಪ್ರತ್ಯೇಕವಾಗಿ ಆನ್‌ಲೈನ್ ಚಲನ್ ಮೂಲಕ ಪಾವತಿಸಬೇಕು. ಹಲವು ಕೋರ್ಸ್‌ಗಳ ಶುಲ್ಕಗಳನ್ನು ಕ್ರೋಢೀಕರಿಸಿ ಒಂದೇ ಚಲನ್‌ನಲ್ಲಿ ಪಾವತಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಕ್ರೋಢೀಕೃತ ಬ್ಯಾಂಕ್ ಚಲನ್‌ಗಳನ್ನು ಸಲ್ಲಿಸಿದಲ್ಲಿ ಸದರಿ ಚಲನ್‌ಗಳನ್ನು ತಿಸ್ಕರಿಸಲಾಗುವುದು. 2017-18 ನೇ ಸಾಲಿನಿಂದ ಬಾಕಿ ಶುಲ್ಕಕ್ಕೆ ಷೇರು ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ನಿಗದಿದ ಶುಲ್ಕವನ್ನು ಸಂಪೂರ್ಣವಾಗಿ ಆಯಾ ಕೋರ್ಸ್‌ಗೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸುವುದು ಕಡ್ಡಾಯವಾಗಿದೆ. ಹಾಗೂ ಈ ಸಂಬಂಧ ಪ್ರತ್ಯೇಕ ಪಟ್ಟಿ ಸಲ್ಲಿಸುವುದು.

ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ಕ್ರೋಢೀಕೃತ ವಿದ್ಯಾರ್ಥಿಗಳ ಪಟ್ಟಿಯ ಹಾರ್ಡ್ ಕಾಪಿಯನ್ನು ಸದರಿ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಿರುವಂತೆ ತಯಾರಿಸಿ ಪ್ರವೇಶಾತಿ ಸಂದರ್ಭದಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಹಾಗೂ ಸಾಫ್ಟ್ ಕಾಪಿಯನ್ನು ದೂರ ಶಿಕ್ಷಣ ನಿರ್ದೇಶನಾಲಯದ ಇ-ಮೇಲ್ ವಿಳಾಸ **www.directorddeku@gmail.com** ಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

ಪ್ರವೇಶ ಶುಲ್ಕವನ್ನು ವಿಶ್ವವಿದ್ಯಾಲಯದ ಎಸ್.ಬಿ.ಐ. **ಪವರ್ ಜ್ಯೋತಿ** ಖಾತೆ ಸಂಖ್ಯೆ **64100999567** ಕ್ಕೆ ಮಾತ್ರ ಜಮೆ ಮಾಡುವುದು. ಅನ್ಯ ಖಾತೆಗಳಿಗೆ ಪ್ರವೇಶ ಶುಲ್ಕವನ್ನು ಜಮೆ ಮಾಡಿದಲ್ಲಿ ಪ್ರವೇಶಾತಿಯನ್ನು ತಿರಸ್ಕರಿಸಲಾಗುವುದು.

ಅಧ್ಯಯನ ಕೇಂದ್ರಗಳ ಮೂಲಕ ಸಲ್ಲಿಸಲಾಗುವ ಅನ್ಯ ವಿಶ್ವವಿದ್ಯಾಲಯದ ಲ್ಯಾಟರಲ್ ಎಂಟ್ರಿ ಪ್ರವೇಶಾತಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸ್ವೀಕರಿಸಲಾಗುವುದು. ವಿಶ್ವವಿದ್ಯಾಲಯ ನಿಗದಿಪಡಿಸಿದ ನಿಯಮಾವಳಿಯನ್ವಯ ತಾಳೆಹೊಂದದ ಪ್ರವೇಶ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅನ್ಯ ವಿಶ್ವವಿದ್ಯಾಲಯದ ದ್ವಿತೀಯ ಮತ್ತು ತೃತೀಯ ವರ್ಷದ **(One Sitting)** ಪ್ರವೇಶಾತಿಗೆ ದಂಡ ಶುಲ್ಕವಿರುವುದಿಲ್ಲ. ಲ್ಯಾಟರಲ್ ಎಂಟ್ರಿ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಿ ಸಲ್ಲಿಸುವುದು.

ಲ್ಯಾಟರಲ್ ಎಂಟ್ರಿ ಮೂಲಕ ನೇರ ಪ್ರವೇಶ ಪಡೆಯುವ ಕುವೆಂಪು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಿಗದಿತ ದಿನಾಂಕದ ನಂತರ ಪ್ರಥಮ ಹಾಗೂ ದ್ವಿತೀಯ ವರ್ಷಕ್ಕೆ **(One Sitting)** ಪ್ರವೇಶ ಪಡೆಯುವ ವಿದ್ಯಾರ್ಥಿಗಳು ನಿಗದಿಪಡಿಸಿದ ದಂಡ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ದಂಡ ರಹಿತ ಅವಧಿಯಲ್ಲಿ ಪ್ರವೇಶಾತಿ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಂಡ ಸಹಿತದ ಅವಧಿ ಹಾಗೂ ದಂಡ ಶುಲ್ಕ ಅವಧಿ ಮುಕ್ತಾಯಗೊಂಡ ನಂತರವೂ ಬ್ಯಾಂಕ್‌ಗೆ ದಂಡ ಶುಲ್ಕ ರಹಿತ ಪ್ರವೇಶ ಶುಲ್ಕ ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಅಂತಹ ಯಾವುದೆ ಪ್ರಕರಣಗಳನ್ನು ಪರಿಗಣಿಸಲಾಗುವುದಿಲ್ಲ.

ಮೇಲ್ಕಂಡ ಪ್ರಕರಣದಂತೆಯೆ ಒಟ್ಟು ಪ್ರವೇಶ ಶುಲ್ಕಕ್ಕೆ ಡಿ.ಡಿ. / ಧನಾದೇಶವನ್ನು ಸಲ್ಲಿಸುತ್ತಿರುವುದು ಕಂಡುಬಂದಿದೆ. ಅಂತಹ ಪ್ರಕರಣವನ್ನೂ ಸಹಾ ಪರಿಗಣಿಸಲಾಗುವುದಿಲ್ಲ.

ಎಲ್ಲಾ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳು ತಮಗೆ ಅನ್ವಯಿಸಬಹುದಾದ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

**ಸಹಿ/-**
**ನಿರ್ದೇಶಕರು**

# ANNEXURE

# MODEL FORMAT

**For example :**

| Sl. No. | Appln. No. / Reg. No. | Name of the Candidate | Course | Subject | Prescribed Admission Fee *(per candidate)* | Penal Fee *( if any)* | Total Admission Fee to be paid (Fee + Penal Fee) | Total Admission Fee paid to University | Challan No. / Date / Name of the Bank | Remarks |
|---|---|---|---|---|---|---|---|---|---|---|
| 1 | 2 | 3 | 4 | 5 | 7 | 8 | 9 | 10 | 11 | 12 |
| 1 | DA170003 | Ram Rahim Singh | BA-II | HEP | 5300.00 | Rs.200 | 5500.00 | 5500.00 | 12345/31.01.2018/SBI..... ........................................ | No Dues |
| 2 | | | | | | | | | | |
| 3 | | | | | | | | | | |
| 4 | | | | | | | | | | |
| 5 | | | | | | | | | | |

Seal & Signature
of the Study Centre Co-ordinator.

**NOTE :**

- Do not use separate sheets for different courses. Include all Icourses in one statement in course wise order.
- While mentioning various subjects in the same course with different fee structure, please mention in different rows.